# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **496** (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವರ್ಗಾವಣೆಯಾಗಿರುವುದು) |
| ಸದಸ್ಯರ ಹೆಸರು | :ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : **22.12.2022.** |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಚೋಳಪ್ಪನಹಳ್ಳಿ ಗ್ರಾಮದ ಹಳೆ ಸರ್ವೆ ನಂ.80ರಲ್ಲಿನ ಹೊಸ ಸರ್ವೆ ನಂ.118ರ ಜಮೀನು ಭೂ ಪರಿವರ್ತನೆ ಆಗಿದೆಯೇ; ಹಾಗಿದ್ದಲ್ಲಿ ಯಾವಾಗ ಸದರಿ ಜಮೀನಿನ ಭೂಪರಿವರ್ತನೆ ನೈಜತೆಯಿಂದ ಕೂಡಿದೆಯೇ; (ಭೂ ಪರಿವರ್ತನೆಯ ಪ್ರತಿ ಒದಗಿಸುವುದು) | ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಚೋಳಪ್ಪನಹಳ್ಳಿ ಗ್ರಾಮದ ಹಳೆ ಸರ್ವೆ ನಂ.80ರಲ್ಲಿನ ಹೊಸ ಸರ್ವೆ ನಂ.118ಕ್ಕೆ ಸಂಬಂಧಿಸಿದಂತೆ ಕಳೆದ 20 ವರ್ಷಗಳ ಭೂ ಪರಿವರ್ತನೆ ವಿಷಯ ವಹಿಗಳನ್ನು ಮತ್ತು ಭೂ ಪರಿವರ್ತನಾ ತಂತ್ರಾಂಶದಂತೆ ಭೂ ಪರಿವರ್ತನಾ ಆದೇಶ ಹೊರಡಿಸಿರುವುದಿಲ್ಲ. |
| ಆ) | ಭೂ ಪರಿವರ್ತನೆ ಆಗಿದೆ ಎಂದು ಖಾತೆ ಮಾಡಿಸಲು ಅರ್ಜಿ ಬಗ್ಗೆ ತಕರಾರು ಇದ್ದರೂ ಸಹ ಹೊಸಕೋಟೆ ತಾಲ್ಲೂಕಿನ ಚೊಕ್ಕಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಖಾತೆ ಮಾಡಲಾಗಿದೆಯೇ? (ಸಂಪೂರ್ಣ ಮಾಹಿತಿ ಒದಗಿಸುವುದು ಹಾಗೂ ಸದರಿ ವಿಷಯದ ಬಗ್ಗೆ ಅರ್ಜಿದಾರರ ಮತ್ತು ಪಂಚಾಯಿತಿಯ ಪತ್ರಗಳನ್ನು ಒದಗಿಸುವುದು) | ಹೊಸಕೋಟೆ ತಾಲ್ಲೂಕಿನ ಚೊಕ್ಕಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಭೂ ಪರಿವರ್ತನೆಯ ಬಗ್ಗೆ ಹೊಸಕೋಟೆ ತಹಶೀಲ್ದಾರ್ ರವರಿಂದ ನೈಜತೆ ಪ್ರಮಾಣ ಪತ್ರ ಸ್ವೀಕೃತವಾಗದ ಹಿನ್ನೆಲೆಯಲ್ಲಿ ತೆರಿಗೆ ನಿರ್ಧರಣೆ ಪಟ್ಟಿ ಮಾಡಲು ಕ್ರಮವಹಿಸಿರುವುದಿಲ್ಲ.<br><br>ಶ್ರೀ ಪ್ರದೀಪ್ ಬಾಬು ಬಿನ್ ಸುರೇಶ್ ಬಾಬು ರವರು ತೆರಿಗೆ ನಿರ್ಧರಣೆ ಪಟ್ಟಿ ಮಾಡಲು ಸಲ್ಲಿಸಿರುವ ಅರ್ಜಿ ಶ್ರೀ ಕೃಷ್ಣಪ್ಪ ಬಿನ್ ಲೇಟ್ ಮುನಿಶಾಮಪ್ಪ ರವರು ಸಲ್ಲಿಸಿರುವ ತಕರಾರು ಅರ್ಜಿ ಮತ್ತು ಶ್ರೀ ಕೃಷ್ಣಪ್ಪ ಬಿನ್ ಲೇಟ್ ಮುನಿಶಾಮಪ್ಪ ಇವರಿಗೆ ಹಿಂಬರಹ ನೀಡಲಾದ ದಿನಾಂಕ:19.10.2022ರ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ: ಆರ್‌ಡಿ 308 ಎಲ್‌ಜಿಕ್ಯೂ 2022

**(ಆರ್.ಅಶೋಕ)**
ಕಂದಾಯ ಸಚಿವರು